ಮನೆಯೊಳಗೆ ಹರಕು ಕೌದಿಯೊಂದನ್ನು ಹಾಸಿ, ಮತ್ತೊಂದು ಕೌದಿಯ ತುಣುಕನ್ನು ಹೊದಿಸಿ ಮಲಗಿದ ಹದಿನಾಲ್ಕು ತಿಂಗಳ ಮಗು ಎದ್ದು ಅಳಲಾರಂಭಿಸಿದಾಗ, ಮನೆಯ ಕಟ್ಟೆಯ ಮೇಲೆ ಮೊರದಲ್ಲಿ ಅಕ್ಕಿಕಾಳಿನಿಂದ ಹರಳು ಆಯುತ್ತ ಕುಳಿತ ಚೆನ್ನಮ್ಮನಿಗೆ ಒಂದು ಕ್ಷಣವೂ ತಡೆಯಲಾಗಲಿಲ್ಲ. ಎದ್ದು ಒಳಗೋಡಿದವಳೇ ಮಗನನ್ನೆತ್ತಿಕೊಂಡು, ಗಲ್ಲಕ್ಕೊಂದು ಮುದ್ದಿಕ್ಕಿ 'ನಿದ್ದಿ ಮುಗೀತಾ?' ಎಂದು ಕೇಳುತ್ತಲೇ ಹೊರಗಟ್ಟೆಗೆ ಬಂದು ಕೂತಳು. ತನ್ನ ಸೀರೆಯ ಸೆರಗನ್ನು ಮರೆಮಾಡಿ, ತೊಟ್ಟ ಕುಬ್ಬಸದ ಒಂದು ಭಾಗವನ್ನು ಮೇಲೆತ್ತಿ, ಮಗುವಿನ ಬಾಯಿಗೆ ಮೊಲೆಯೂಡಿಸಿದಳು. ಕೆಲವು ಕ್ಷಣಗಳ ಬಳಿಕ ಮತ್ತೊಂದು ಮೊಲೆಯ ಸರದಿ. ಅದೂ ಮುಗಿದ ಮೇಲೆ, ಮಗುವಿನ ಮೊಗದ ಮೇಲೆ ಬೆಳದಿಂಗಳು ಪಸರಿಸಿದಂಥ ಎಳೆನಗುವನ್ನು ಕಂಡು ಹಿಗ್ಗಿದಳು. ತಾನು ಕುಳಿತಲ್ಲಿಯೇ ತನ್ನ ಎರಡೂ ಕಾಲನ್ನು ಉದ್ದ ಬಿಟ್ಟು, ತೊಡೆಗಳ ನಡುವೆ ಮಗುವನ್ನು ಮಲಗಿಸಿ ಅವನ ಕಣ್ಣಲ್ಲಿ ಕಣ್ಣಿಟ್ಟು 'ಆ ಊ ಆ ಊ' ಎಂದು ಅವನನ್ನು ಮಾತಾಡಿಸುತ್ತಲೇ, ಮೊರದಲ್ಲಿ ಉಳಿದ ಅಕ್ಕೀಕಾಳಿಗೆ ಕೈ ಹಾಕಿದಳು. ಮಗು ಎಚ್ಚರವಿದ್ದಾಗಲೂ, ಆತ ಮಲಗಿದ್ದಾಗಲೂ ಚೆನ್ನಮ್ಮನಿಗೆ ಪುರುಸೊತ್ತೆಂಬುದೇ ಇಲ್ಲ. ಒಂದಿಲ್ಲೊಂದು ಕೆಲಸ... ಕೆಲಸ...

'ಏನ್ ಅಷ್ಟ ಕೆಲ್ಸಾ ಕೆಲ್ಸಾ ಅಂತ ಸಾಯ್ತೀ, ಬಾ ಒಂದ್ಸೂರು ನನ್ನೆದುರಿಗೆ ಕುಂದ್ರು. ನಾ ಅಂದ್ರ ನಿಂಗ ಪಿರೀತಿ ಇಲ್ಲೇನು?'

ಮಾವ ಸಂಗಪ್ಪನ ಮಾತು ಕೇಳಿ ಚೆನ್ನಮ್ಮ ಗಲಿಬಿಲಿಗೊಳ್ಳುವಳು.

'ಹಂಗ್ಯಾಕ್ ಹೇಳ್ತೀರಿ ಮಾವಾ? ನಾ ನಿಮಗ ಏನ್ ಕಡಿಮಿ ಮಾಡೀನಿ ಹೇಳ್ರಿ' ಎಂದು ಅವಳ ಸೌಮ್ಯ ದನಿಯ ಉತ್ತರ.

ತನ್ನ ಮಾತೇ ತಪ್ಪಿತೇನೋ ಎಂದುಕೊಂಡ ಸಂಗಪ್ಪ 'ಹಾಂಗಲ್ಲ. ನಾ ಸುಮ್ಮಾಕ್ ಮಸ್ಕೀರಿ ಮಾಡ್ದೆ.' ಎಂದು ಸಮಜಾಯಿಷಿ ಹೇಳಿದಾಗ, ಅವನತ್ತ ಗೋಣು ತಿರುಗಿಸಿ ಒಂದು ಮುಗುಳುನಗೆಯ ನೋಟ ಬೀರಿದರೆ ಮುಗಿಯಿತು ಅವರ ಹುಸಿ ಸಂವಾದ. ಆಕೆಯ ಮಾವ ಅವಳ ಹತ್ತಿರ ಸರಿದು ಅವಳ ಮಗುವಿಗೊಂದು, ಅವಳ ಹಣೆಗೊಂದು ಮುದ್ದು ಕೊಟ್ಟು, 'ಅತು ನಿನ್ನ ಕೆಲಸ ನಡೀಲಿ' ಎಂದು ಮತ್ತೆ ಬೀದಿಗಿಳಿಯುವನು. ಒಮ್ಮೊಮ್ಮೆ ತನ್ನ ಮಾವ ತನ್ನ ಮೇಲೆ ಇಷ್ಟೆಲ್ಲಾ ಪ್ರೀತಿ ತೋರಿಸುವುದು ಯಾಕಿರಬೇಕು? ಎಂದು ಆಕೆಗೆ ವಿಚಿತ್ರವೆನಿಸಿದ್ದೂ ಉಂಟು. ಆದರೆ ತನ್ನ ತಂದೆಯ ಹಾಗಿದ್ದ ಮಾವ ಮಾಡುವುದರಲ್ಲಿ ಇಲ್ಲದ ತಪ್ಪು ಹುಡುಕುವುದೇಕೆಂದು ಸುಮ್ಮನಿದ್ದು ಬಿಡುವಳು. ಮಗುವನ್ನು ಬದಿಗೆ ಮಲಗಿಸಿಕೊಂಡು, ಯಾವುದಾದರೂ ಕೆಲಸದಲ್ಲಿ ತೊಡಗಿರುವಾಗ, ಅವಳ ಮನಸ್ಸಿನಲ್ಲಿ ಒಂದೊಂದಾಗಿ ಹಿಂದಿನ ದಿನಗಳ ನೆನೆಪುಗಳು ಹರಿದಾಡುವವು....

* * *

ತನ್ನ ಮದುವೆಯಾಗುವ ಮೊದಲು, ಒಂದಿಬ್ಬರು ಹುಂಬರು ತನ್ನನ್ನು ನೋಡಲಿಕ್ಕೆ ಬಂದಿದ್ದರು. ತಾನು ಒಪ್ಪಿರಲಿಲ್ಲ. ಆ ಬಳಿಕ ಕೆಲವು ದಿನ ಕಳೆದ ಮೇಲೆ, ನಮ್ಮಪ್ಪನ ಗೆಳೆಯರು ಮನೆಗೆ ಬಂದು 'ಕಾಕಾ ನಿಮಗೊಂದು ಆನಂದದ ಬಾತ್ಮೀ ತಂದೀವಿ. ನಿಮ್ಮ ಚೆನ್ನಮ್ಮನ ಸಲುವಾಗಿ ಒಬ್ಬ ಹುಡುಗನ್ನ ನೋಡೀವಿ, ಬಂಗಾರದಂತ ಹುಡುಗ. ತೀರಾ ಸಜ್ಜನ. ಎಲ್ಲಾರ ಮನಿಗೆ ಕರಂಟಿನ ಲೈಟ್ ಕೊಡೋವಂಥಾ ಲೈನ್‌ಮನ್ ಕೆಲಸಾ. ಕೈ ತುಂಬ ಸಂಬಳ....' ಎಂದೆಲ್ಲಾ ಹೇಳಿದ್ದನ್ನು ಕೇಳಿ ಹಿಗ್ಗಿನಿಂದಲೇ ಈ ಮಲ್ಲೇಶಿಯ ಜೊತೆಗೆ ಮದುವೆಯಾಗಲು ಒಪ್ಪಿಗೆ ಕೊಟ್ಟಿದ್ದಳು. ಈವರೆಗೆ ಅವಳಂತೂ ಚಿಮಣೀ ಎಣ್ಣೆಯ ಬುಡ್ಡಿಯ ಬೆಳಕಿನಲ್ಲೇ ಬೆಳೆದವಳು. 'ಎಲ್ಲಾರ ಮನೀಗೆ ಕರಂಟ್ ಲೈಟ್ ಕೊಡೋದು ಅಂದ್ರ ಎಂಥಾ ಪುಣ್ಯದ ಕೆಲಸ!' ಎನಿಸಿ ಅವಳ ಮನಸ್ಸು ಹಿಗ್ಗಿ ಹೀರೇಕಾಯಿಯಾಗಿತ್ತು. ಆ ಹಿಗ್ಗಿನಲ್ಲಿಯೇ ಮಲ್ಲೇಶಿಯ ಮಡದಿಯಾಗಿ ಅವನ ಮನೆ ತುಂಬಿಸಿದ್ದಳು.

ಮದುವೆಯಾದ ನಂತರ ಕೆಲ ದಿನಗಳಲ್ಲಿಯೇ, ತನ್ನ ಗಂಡನ ಕೆಲಸ ಅಷ್ಟು ಸುಲಭದ್ದಲ್ಲ ಎಂದು ಅವಳ ಅರಿವಿಗೆ ಬರಲಾರಂಭಿಸಿತು. ತನ್ನ ಗಂಡ ಮಲ್ಲೇಶಿ ಯಾವಾಗ ನೋಡಿದರೂ ತೆಂಗಿನ ಮರದ ಹಾಗೆ ಎತ್ತರವಿರುವ ಲೈಟ್ ಕಂಬ ಹತ್ತಿ ಇಳಿಯುವ ಕೆಲಸದಲ್ಲೇ ನಿರತನಾಗಿರಬೇಕು. ಕಚೇರಿಯವರು ಕರೆದರೂ ಓಡಬೇಕು, ಯಾವುದಾದರೂ ಮನೆಯವರ ತಕರಾರು ಬಂದರೂ ಓಡಬೇಕು. ಮನೆಗೆ ಊಟಕ್ಕೆ ಬಂದರೂ, ಅವಸರದಿಂದಲೇ ನಾಲ್ಕು ತುತ್ತು ನುಂಗಿದವನೇ ಮತ್ತೆ ತನ್ನ ಕೆಲಸಕ್ಕೆ ಹೊರಟು ಬಿಡಬೇಕು. ಮಡದಿ ಮತ್ತು ಮಗುವಿನ ಜೊತೆಗೆ ಒಂದಿಷ್ಟು ಹಾಯಾಗಿ ಕೂತಿರಲೂ ಅವನಿಗೆ ಸಮಯವಿರುವುದಿಲ್ಲ. ಇದೆಂಥಾ ಸಂಸಾರ!

ಪಾಪ, ಚೆನ್ನಮ್ಮ ಒಳಗೊಳಗೇ ಚಡಪಡಿಸುತ್ತಾಳೆ. ಯಾರಿಗೂ ಹೇಳಲಾಗದ ಸಂಕಟವನ್ನೇ ಅನುಭವಿಸುತ್ತಾಳೆ. ಅವಳ ಕೊರಗು ಯಾರಿಗೂ ಹೇಳುವಂತಿರಲಿಲ್ಲ. ತನ್ನ ಮಾವನಿಗೂ ಆಕೆ ಬಾಯಿ ಬಿಚ್ಚಿ ಹೇಳುವವಳಲ್ಲ. ಆತ ಹತ್ತಿರ ಬಂದು ಒಂದಿಷ್ಟು ಕಾಲ ಅದು ಇದು ಅಂತ ಪ್ರೀತಿ ತೋರಿಸಿದಾಗ, ಅದರಲ್ಲಿಯೇ ಸ್ವಲ್ಪ ಸಮಾಧಾನ ಪಟ್ಟುಕೊಂಡು ಸುಮ್ಮನಿರುತ್ತಿದ್ದಳು. ಯಾಕೋ ಒಂದೊಂದು ದಿನ, ಆ ಮಾವ ಏನೇನೋ ಮಾತಾಡುತ್ತ ತನ್ನ ಮೈಮೇಲೆ ಕೈಯಾಡಿಸುವಾಗ ಮಾತ್ರ ಅವಳಿಗೆ ಬಹಳೇ ಮುಜುಗರವೆನಿಸುತ್ತಿತ್ತು. 'ಅಲ್ಲ ಚೆನ್ನೀ, ನಿನ್ನ ಸೀರೀ– ಕುಬ್ಬಸ ಎಲ್ಲಾ ಹರದಾವಂತ ನನಗೆ ಹೇಳ್ಬಾರ್ದೇನು?' ಎಂದು ಕೇಳುತ್ತ ತನ್ನ ಮೊಲೆಯನ್ನು ಮುಟ್ಟಿದ್ದು ಯಾಕಿರಬೇಕು? ಎಂದು ಆಕೆ ಪೇಚಾಡಿದ್ದೂ ಉಂಟು. ಅಥವಾ ಅದು ತನ್ನ ಭ್ರಮೆಯೂ ಇರಬಹುದು ಎಂದುಕೊಂಡದ್ದುಂಟು. ತಾನು ಈ ಮನೆಗೆ ಸೊಸೆಯಾಗಿ ಬರುವ ಮೊದಲೇ ತನ್ನತ್ತೆ ಈ ಲೋಕ ಬಿಟ್ಟು ಹೋಗಿದ್ದಳು. ಆ ಮನೆಯಲ್ಲಿ ತನ್ನ ಮಾವ, ಅವರ ಇಬ್ಬರು ಗಂಡು ಮಕ್ಕಳು– ಇಷ್ಟೇ ಜನ. ಈಗ ಅವಳೇ ಹಿರಿಯವನ ಮಡದಿ.

ತನಗಿಂತ ಐದಾರು ವರ್ಷ ಸಣ್ಣವನಾದ ತನ್ನ ಮೈದುನ ರಮೇಶ ಬಹಳ ಬುದ್ಧಿವಂತನೆಂಬ ಹೆಮ್ಮೆಯೂ ಅವಳಿಗಿತ್ತು. ಪಕ್ಕದ ಊರಿನ ಪ್ರೌಢಶಾಲೆಯಲ್ಲಿ ಆತ ಓದುತ್ತಿದ್ದ. ನಿತ್ಯವೂ ಸಾಯ್ಕಲ್ ಮೇಲೆ ಹೋಗಿ ಬರುತ್ತಿದ್ದ. ಆತ ಪ್ರತಿಯೊಂದು ಪರೀಕ್ಷೆಯಲ್ಲೂ ಉತ್ತಮ ಗುಣಗಳನ್ನು ಪಡೆಯುತ್ತಾ ಈಗ ಹತ್ತನೆಯ ವರ್ಗಕ್ಕೆ ಸೇರಿದವನಾಗಿದ್ದ. ಪ್ರತಿಯೊಂದು ಪರೀಕ್ಷೆಯ ಪರಿಣಾಮ ತಿಳಿದೊಡನೆ 'ಚೆನ್ನಕ್ಕಾ ಇಲ್ಲಿ ನೋಡ್ರಿ ನನ್ನ ಮಾರ್ಕ್ಸ್ ಶೀಟ್' ಎಂದು ತನ್ನೆದುರು ಹಿಡಿಯುತ್ತಾನೆ. ತಾನು ಪಿಳಿ ಪಿಳಿ ಕಣ್ಣು ಬಿಟ್ಟು ಓದಲು ಪ್ರಯತ್ನಿಸುತ್ತಾಳೆ. ತನ್ನ ಅಸಹಾಯಕತೆಯನ್ನು ತಿಳಿದ ರಮೇಶ ಆ ಕಾಗದವನ್ನು ತನ್ನ ಕೈಗೆತ್ತಿಕೊಂಡು ತಾನೇ ಓದಿ ತೋರಿಸಿ, 'ಹ್ಯಾಂಗದರೀ ಚೆನ್ನಕ್ಕಾ ನನ್ನ ರಿಜಲ್ಟು?' ಎಂದು ಕೇಳುತ್ತಾನೆ. 'ನಂಗಂತೂ ಭಾಳ ಖುಷಿ ಆತಪ್ಪ. ತಡೀ, ನಿನ್ನ ಬಾಯಿ ಸಿಹಿ ಮಾಡ್ತೀನಿ' ಎಂದು ಎದ್ದವಳೇ, ಅಡಿಗೆ ಮನೆಯಿಂದ ಬೆಲ್ಲದ ತುಣುಕೊಂದನ್ನು ತಂದು ಅವನ ಬಾಯಿಗಿಡುತ್ತಾಳೆ!

ತನ್ನ ಮೈದುನ ಮಾತು ಮಾತಿಗೆ ತನ್ನನ್ನು ಚೆನ್ನಕ್ಕಾ ಚೆನ್ನಕ್ಕಾ ಎಂದು ಕರೆಯುವುದು ಅವಳಿಗೆ ಬಹಳ ಹಿತಕರವೆನಿಸುತ್ತಿತ್ತು. ಆತ ತೀರಾ ಚಿಕ್ಕವನಲ್ಲ ವಾದರೂ, ಒಮ್ಮೊಮ್ಮೆ ಮಾತಿನ ಭರಾಟೆಯಲ್ಲಿ ಚೆನ್ನಮ್ಮ ಅವನ ಗಲ್ಲ ಹಿಂಡುವುದೂ, 'ಸಾಕು ಬಿಡ್ರೀ ಚೆನ್ನಕ್ಕಾ' ಎಂದು ಆತ ಕೂಗುವುದೂ ನಡೆದೇ ಇರುತ್ತಿತ್ತು. ಒಂದೊಂದು ದಿನ ಶಿಕ್ಷಕರು ಬಹಳಷ್ಟು ಬರೆಯುವ ಮನೆಗೆಲಸ ಕೊಟ್ಟಿದ್ದಾರೆಂದು ಹೇಳಿ ರಮೇಶ ತನ್ನ ಗೆಳೆಯನ ಮನೆಗೆ ಹೋಗಿ ಬಹಳ ಹೊತ್ತು ಅಲ್ಲಿಯೇ ಉಳಿದಾಗ, ಆ ಅವಧಿಯಲ್ಲಿ ಅವನ ಬಾಯಿಂದ 'ಚೆನ್ನಕ್ಕಾ' ಎಂಬ ಕರೆ ಕೇಳದೆ ಅವಳಿಗೇನೋ ಕಳೆದುಕೊಂಡಂತೆಯೇ ಭಾಸವಾಗುವುದು! ಅಡಿಗೆ ಮನೆಯಲ್ಲಿ ಕೆಲಸಕ್ಕೆ ತೊಡಗಿಕೊಂಡಾಗ ಹೊರ ಬಾಗಿಲಿನಿಂದ ಚೆನ್ನಕ್ಕಾ ಎಂದು ಕರೆದಂತೆಯೇ ಅನಿಸುವುದು! ಚೆನ್ನಮ್ಮನಿಗೆ ಅವನ ದನಿಯ ಮೇಲೆ ಅಷ್ಟೊಂದು ಮೋಹ...

ಆಕೆ ಹೆಚ್ಚಿಗೆ ಓದಿದವಳೂ ಅಲ್ಲ. ಊರಲ್ಲಿಯ ಪ್ರಾಥಮಿಕ ಶಾಲೆಯಲ್ಲಿ ಎರಡನೆಯ ವರ್ಗದಲ್ಲಿರುವಾಗಲೇ ತಾಯಿಯ ಒತ್ತಾಯದಿಂದಾಗಿ ತಾನು ಶಾಲೆಯ ದಾರಿಯನ್ನೇ ಮರೆಯಬೇಕಾಯಿತು. ತನ್ನ ಮಾತು ಕೇಳಿ, ಶಾಲೆ ಬಿಟ್ಟಳೆಂಬ ಖುಷಿಯಲ್ಲಿ ಅವಳ ತಾಯಿ ಅವಳಿಗೆ ಹೊಸ ಲಂಗ ಹೊಲಿಸಿ ಉಡಿಸಿದ್ದನ್ನು ನೆನೆದುಕೊಂಡರೆ, ಈಗ ಅವಳಿಗೆ ನಗೆ ಬರುತ್ತದೆ! ತನ್ನ ಜೊತೆಗೇ ಓದುತ್ತಿದ್ದ ಊರ ಗೌಡರ ಮಗಳು ಶಾರಿ ಪ್ರತಿ ಹಬ್ಬಕ್ಕೊಂದು ಹೊಸ ಲಂಗ ಉಟ್ಟು ಶಾಲೆಗೆ ಬಂದು ಬಡಿವಾರ ಮಾಡುತ್ತಿದ್ದಳು. ಎರಡು ವರ್ಷಗಳ ನಂತರ ತನ್ನ ತಾಯಿ ಹೊಲಿಸಿದ್ದ ಹೊಸ ಲಂಗವನ್ನು ಉಟ್ಟು, ಚೆನ್ನಮ್ಮ ಒಂದು ದಿನ ಹಿಗ್ಗಿನಿಂದ ತನ್ನ ಓಣಿಯ ಗೆಳತಿಯರೊಡನೆ ಆಡಿಕೊಂಡಿದ್ದವಳು ಸಂಜೆಯಾಗುತ್ತಲೇ ಹೊಸ ಲಂಗವನ್ನು ತೆಗೆದು ಮಡಿಕೆ ಹಾಕಿಟ್ಟು, ತಾಯಿಯ ಅಪ್ಪಣೆಯಂತೆ ಮತ್ತೆ ಹಳೆಯ ಲಂಗವನ್ನೇ ಉಟ್ಟಿದ್ದಳು. ಅದೆಲ್ಲಾ ಈಗ ನೆನಪಿನ ಸರಮಾಲೆಯಲ್ಲಿ ಜಮಾ! ನೆನಪು, ಬರೀ ನೆನಪುಗಳು... ಒಂದು ಬಗೆಯ ನೋವಿನ ನಗೆ ಬರಿಸುವ ನೆನಪುಗಳು...

ಆ ಎಲ್ಲ ನೆನಪುಗಳಲ್ಲಿ ಒಂದೊಂದೇ ಕಳಚಿ ಹೋಗುವಂತೆ ಮಾಡಿದ್ದು ರಮೇಶನ ಆತ್ಮೀಯ ಆಕರ್ಷಣೆ, ನಿರ್ಮಲ ನಗೆ, ಹಾಗೂ ಸಲಿಗೆಯ ಸಲ್ಲಾಪ.